ತಂತಿ ವಿಳಾಸ: ಯೂನಿರಿಜ್
ದೂರವಾಣಿ ಸಂಖ್ಯೆ: 2419677/2419361

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ:1916

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್.-2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು
ದಿನಾಂಕ 06.02.2026

ಸಂಖ್ಯೆ:ಜಿಎಲ್5/103/ಇತರೆ/2021-22

## ಸುತ್ತೋಲೆ

ವಿಷಯ: ವಿಶ್ವವಿದ್ಯಾನಿಲಯದ (ಮಾನಸಗಂಗೋತ್ರಿಯ ಆವರಣವನ್ನೊಳಗೊಂಡಂತೆ) ಆವರಣದಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಬಿಸಾಡದಂತೆ ಮತ್ತು ಬ್ಯಾನರ್/ಫ್ಲೆಕ್ಸ್‌ಗಳನ್ನು ಅಳವಡಿಸದಂತೆ ಕ್ರಮಕೈಗೊಳ್ಳುವ ಬಗ್ಗೆ.

ಉಲ್ಲೇಖ:1. ಈ ಕಛೇರಿ ಸುತ್ತೋಲೆ ಸಂಖ್ಯೆ:ಜಿಎಲ್5/03/2023-24, ದಿನಾಂಕ: 17.07.2025
2. ಪೊಲೀಸ್ ನಿರೀಕ್ಷಕರು, ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ, ಮೈಸೂರು ಇವರ ಪತ್ರ ಸಂಖ್ಯೆ: ಜೆಎಲ್‌ಪಿಎಸ್/ಪೊ.ನೊ/2025, ದಿನಾಂಕ: 14.06.2025
3. ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ: 01.07.2025

-:-

ದಿನಾಂಕ: 01.07.2025 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ ಮತ್ತು ಉಲ್ಲೇಖಿತ ಸುತ್ತೋಲೆ(1)ರ ಅನ್ವಯ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರು, ನಿರ್ದೇಶಕರು, ಬಟವಾಡೆ ಅಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಘಟಕ/ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಕೆಳಗಿನ ಅಂಶಗಳನ್ನು ಗಮನಕ್ಕೆ ತರುತ್ತಾ, ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತೊಮ್ಮೆ ತಿಳಿಸಲಾಗಿದೆ.

1. ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳ ಆವರಣ, ಕಾಲೇಜು ಆವರಣ, ಕ್ರೀಡಾ ಮೈದಾನಗಳಲ್ಲಿ ಮತ್ತು ಪಾರ್ಕಿಂಗ್ ಜಾಗಗಳಲ್ಲಿ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಬಿಸಾಡದೆ, ಕಸದ ಬುಟ್ಟಿ (Dustbin)ಗಳಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ವ್ಯವಸ್ಥಿತವಾಗಿ ವಿಭಾಗದಲ್ಲಿ ಒಂದೆಡೆ ಹಾಕಲು ಮತ್ತು ವಿಲೇವಾರಿ ಮಾಡಿಸಲು ಕ್ರಮವಹಿಸುವುದು.
2. ಮಾನಸಗಂಗೋತ್ರಿ ಆವರಣವನ್ನು ಪ್ಲಾಸ್ಟಿಕ್ ಮುಕ್ತಗೊಳಿಸಲು ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳು ಎಲ್ಲೆಂದರಲ್ಲಿ ಕಸ ಬಿಸಾಡದಿರುವ ಬಗ್ಗೆ ಅವರ ಗಮನಕ್ಕೆ ತಂದು ಮನವರಿಕೆ ಮಾಡಿಕೊಡುವುದು.
3. ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಆವರಣದಲ್ಲಿ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೆ ಶಾಶ್ವತವಾಗಿ ಫ್ಲೆಕ್ಸ್ ಅಳವಡಿಸುವಂತಿಲ್ಲ.
4. ವಿಶ್ವವಿದ್ಯಾನಿಲಯದ ಆವರಣದಲ್ಲಿ ಪೂರ್ವಾನುಮತಿಯೊಂದಿಗೆ ಆಯೋಜಿಸಲ್ಪಡುವ ಕಾರ್ಯಕ್ರಮಗಳಿಗೆ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸಿದಲ್ಲಿ ಅವುಗಳನ್ನು ಕಾರ್ಯಕ್ರಮ ಮುಗಿದ (02) ಎರಡು ದಿನಗಳಲ್ಲಿ ಕಡ್ಡಾಯವಾಗಿ ತೆರವುಗೊಳಿಸಲು ಆಯಾ ವಿಭಾಗ/ಕಛೇರಿಯ ಮುಖ್ಯಸ್ಥರು /ಆಯೋಜಕರು ನಿಗಾ ವಹಿಸುವುದು.
5. ಈ ಸಂಬಂಧ, ಉಲ್ಲೇಖಿತ ಪತ್ರದನ್ವಯ ಕಾನೂನು ಸುವ್ಯವಸ್ಥೆಗೆ ಶಾಂತಿಭಂಗವಾದಲ್ಲಿ ಕಾರ್ಯಕ್ರಮ ಆಯೋಜಿಸುವವರು ನೇರ ಹೊಣೆಗಾರರಾಗಿರುತ್ತಾರೆ.

ಆದ್ದರಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿ ಶೈಕ್ಷಣಿಕ ವಾತಾವರಣಕ್ಕೆ ಯಾವುದೇ ಶಾಂತಿಭಂಗವಾಗದ ರೀತಿಯಲ್ಲಿ ಎಲ್ಲಾ ವಿದ್ಯಾರ್ಥಿ ಸಂಘಟನೆಗಳು, ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಬಟವಾಡೆ ಅಧಿಕಾರಿಗಳು, ಕಾರ್ಯಕ್ರಮ ಆಯೋಜಿಸುವವರು ಸಹಕರಿಸಲು ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಇವರಿಗೆ:

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಮಾ.ಗಂ.,ಮೈಸೂರು

2. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ಕಾರ್ಯಪಾಲಕ ಅಭಿಯಂತರರು, ವಿ.ವಿ.ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು
5. ಸಿಸ್ಟಮ್-ಕೋರ್ಡಿನೇಟರ್, ಮಾಹಿತಿ ಮತ್ತು ಸಂವಹನ(ಐಸಿಡಿ), ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ-ವಿಭಾಗದಿಂದ ಬರುವ ಮಾಹಿತಿಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಿದೆ
6. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು- ಕಾರ್ಯಕ್ರಮ ಮುಗಿದ ನಂತರ 02 ದಿನಗಳಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸಲು ಕ್ರಮವಹಿಸುವುದು.
7. ಭದ್ರತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು- ಕಾರ್ಯಕ್ರಮ ಮುಗಿದ ನಂತರ 02 ದಿನಗಳಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸಲು ಕ್ರಮವಹಿಸುವುದು.
8. ಅಧ್ಯಕ್ಷರು, ಮೈಸೂರು ವಿಶ್ವವಿದ್ಯಾನಿಲಯ ದಲಿತ ವಿದ್ಯಾರ್ಥಿ ಒಕ್ಕೂಟ, ಮಾನಸಗಂಗೋತ್ರಿ, ಮೈಸೂರು
9. ಸಂಶೋಧನಾ ವಿದ್ಯಾರ್ಥಿಗಳು, ಅಂಗಳ ಸಾಹಿತ್ಯ ಬಳಗ, ಮಾನಸಗಂಗೋತ್ರಿ, ಮೈಸೂರು
10. ದಲಿತ ವಿದ್ಯಾರ್ಥಿ ಪರಿಷತ್(ರಿ), ಮೈಸೂರು ವಿಶ್ವವಿದ್ಯಾನಿಲಯ ಸಮಿತಿ, ಕಛೇರಿ ವಿಳಾಸ#369, 5ನೇ ಮುಖ್ಯ ರಸ್ತೆ, ಟಿ.ಕೆ ಬಡಾವಣೆ ಮೈಸೂರು
11. ಬಹುಜನ ವಿದ್ಯಾರ್ಥಿ ಸಂಘ (BUS), ಮಾನಸಗಂಗೋತ್ರಿ, ಮೈಸೂರು
12. ಅಧ್ಯಕ್ಷರು, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ(ರಿ), ಮಾನಸಗಂಗೋತ್ರಿ, ಮೈಸೂರು
13. ಬುದ್ಧಬಳಗ, ಮಾನಸಗಂಗೋತ್ರಿ, ಮೈಸೂರು
14. ಅಂಗಳ ಸಾಹಿತ್ಯ ಬಳಗ, ಮಾನಸಗಂಗೋತ್ರಿ, ಮೈಸೂರು
15. ಭಾರತೀಯ ವಿದ್ಯಾರ್ಥಿ ಸಂಘ (BUS), ಮಾನಸಗಂಗೋತ್ರಿ, ಮೈಸೂರು
16. ಕಾರ್ಯನಿರ್ವಾಹಕರು, ಜಿಎಲ್1, ಆಡಳಿತ ಶಾಖೆ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು- ಕಾರ್ಯಕ್ರಮಕ್ಕೆ ಸಭಾಂಗಣ ನೀಡುವಾಗ ಮೇಲಿನ ನಿಯಮ ಪಾಲಿಸುವಂತೆ ಷರತ್ತು ವಿಧಿಸತಕ್ಕದ್ದು.

ಪ್ರತಿ:

1. ಪೊಲೀಸ್ ನಿರೀಕ್ಷಕರು, ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ, ಮೈಸೂರು
2. ಮಾನ್ಯ ಕುಲಪತಿ /ಕುಲಸಚಿವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಕಛೇರಿ ಪ್ರತಿ.